C.R.P.67

Form No.4
(Criminal)
Deposition
Sheets
(R.P.No.57)

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್ಃ 256/2019

**ಚಾಸಾ– 31 ಪ್ರಾ.ಸಾ– 18**

| | |
|---|---|
| **ಸಾಕ್ಷಿದಾರರ ಹೆಸರು** | **ವೆಂಕಟೇಶ ಬಿ.ಎಸ್** |
| **ತಂದೆಯ ಹೆಸರು** | **ಲೇಟ್ ಸುಬ್ಬಣ್ಣ** |
| **ವಯಸ್ಸು** | **54 ವರ್ಷಗಳು** |
| **ಉದ್ಯೋಗ** | **ಪೊಲೀಸ್ ಸಬ್ ಇನ್ಸ್‌ಪೆಕ್ಟರ್, ಮಂಡ್ಯ ಪೂರ್ವ ಪೋಲೀಸ್ ಠಾಣೆ** |
| **ವಾಸ** | **ಮಂಡ್ಯ** |

**ಪ್ರಮಾಣವಚನ ಬೋಧಿಸಿದ ದಿನಾಂಕಃ 24.03.2026**

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದ**

1. ನಾನು ದಿಃ03.08.2019 ರಿಂದ ದಿಃ15.06.2021 ರವರಗೆ ಮಂಡ್ಯ ಪಶ್ಚಿಮ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

2. ದಿಃ30.08.2019 ರಂದು ಮದ್ಯಾಹನ 3.00 ಗಂಟೆಗೆ ಈ ಪ್ರಕರಣದ ಪಿರ್ಯಾದಿ ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊಕದ್ದಮೆ ಸಂಖ್ಯೆ 146/2019 ರಲ್ಲಿ ಕಲಂ 143, 504, 506, 448, 427, 323, 354 ಸಹ ಕಲಂ 149 ಐಪಿಸಿ ಹಾಗೂ Sec.3(1)(s), 3(1)(r), 3(1)(g) of SC/ST PoA Act ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ಘನ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಪ್ರಥಮ ವರ್ತಮಾನ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು **ನಿಪಿ.47** ಎಂದೂ ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.47(ಎ)** ಎಂದು ಗುರುತಿಸಲಾಯಿತು. ಪಿರ್ಯಾದಿ ಕೊಟ್ಟ ಲಿಖಿತ ದೂರನ್ನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ

ನಿಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ನಂತರ ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ- 32 ರವರಿಗೆ ಸಲ್ಲಿಸಿರುತ್ತೇನೆ.

3. ನಂತರ ಈ ಪ್ರಕರಣದ ಆರೋಪಿಯನ್ನು ಪತ್ತೆ ಹಚ್ಚಿ ಹಾಜರುಪಡಿಸಿಲು ಚಾಸಾ-32 ರವರಿಗೆ ನನಗೆ ಜ್ಞಾಪನವನ್ನು ನೀಡಿದ್ದು ಅದರಂತೆ ಅದೇ ದಿನ ಠಾಣಾ ಸಿಬ್ಬಂದಿಗಳಾದ ಚಾಸಾ- 20, 21, 22, 23 ರವರನ್ನು ಕರೆದುಕೊಂಡು ಮಂಡ್ಯ ಸಿಟಿ 100 ಅಡಿ ರಸ್ತೆ, ಗಾಂಧಿನಗರದ ಕಡೆಯಿಂದ ಶಂಕರನಗರದ ಕಡೆಗೆ ಪತ್ತೆಗಾಗಿ ಹೋಗಿ ಬಾತಿಂದಾರರಿಂದ ಖಚಿತ ಮಾಹಿತಿ ಪಡೆದು 2 ರಿಂದ 12ನೇ ಆರೋಪಿತರು ಮಂಡ್ಯ ಸಿಟಿ ಅಂಬುಜಮ್ಮ ಪಾರ್ಕಿನ ಬಳಿ ಗುಂಪಾಗಿ ಇದ್ದು ಅವರನ್ನು ಸಿಬ್ಬಂದಿಗಳ ಸಹಾಯದಿಂದ ಮದ್ಯಾಹ್ನ 3.30 ಗಂಟೆಗೆ ವಶಕ್ಕೆ ಪಡೆದು 3.45 ಗಂಟೆಗೆ ತನಿಖಾಧಿಕಾರಿಗಳ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತೇನೆ. ಸದರಿ ವರದಿಯನ್ನು ಈಗ ನೋಡುತ್ತಿದ್ದು ಅದನ್ನು **ನಿಪಿ-48** ಎಂದು ಗುರುತಿಸಲಾಗಿದೆ, ಅದರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ-48(ಎ)** ಎಂದು ಗುರುತಿಸಲಾಗಿದೆ. ಸದರಿ ಆರೋಪಿಯನ್ನು ಗುರುತಿಸಬಲ್ಲೆ, (learned Counsel for Accused persons submits that there is no identity dispute with respect to accused persons). ಚಾಸಾ-3 ರವರು ನಿಪಿ-4 ರಂತೆ ನನ್ನ ಮುಂದೆ ಹೇಳಿಕೆಯನ್ನು ನೀಡಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಡಿ.ಆರ್ ವಕೀಲರಿಂದ:</u>**

4. ಈ ಪ್ರಕರಣಕ್ಕೆ ಸಂಬಂದಪಟ್ಟಂತೆ 1ನೇ ಆರೋಪಿಯಾದ ಶಶಿಧರ ರವರು ಈ ಪ್ರಕರಣದ ಪಿರ್ಯಾದಿ ಪುಟ್ಟಮಾದಯ್ಯ ಬಿನ್ ಕಾಳಯ್ಯ ರವರು ಅನಧೀಕೃತವಾಗಿ ಅವರ ಸ್ವತ್ತಿನಲ್ಲಿ ವಾಸವಾಗಿದ್ದಾರೆ ಅದನ್ನು ತೆರವುಗೊಳಿಸಬೇಕೆಂದು ನಮ್ಮ ಠಾಣೆಯಲ್ಲಿ ದೂರು ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ನನಗೆ ನೆನಪಿಲ್ಲ. ನಿಪಿ-1 ದೂರನ್ನು ಸ್ವೀಕರಿಸಿಕೊಳ್ಳುವ ಪೂರ್ವದಲ್ಲಿ ನಾನು **1**ನೇ ಆರೋಪಿಯನ್ನು ಮತ್ತು ಪಿರ್ಯಾದುದಾರರನ್ನು ಠಾಣೆಗೆ ಕರೆಸಿರುತ್ತೇನೋ ಎಂದರೆ ನೆನಪಿಲ್ಲ. ದೂರು ಸ್ವೀಕರಿಸಿಕೊಳ್ಳುವ ಪೂರ್ವದಲ್ಲಿ **1**ನೇ ಆರೋಪಿ ಮತ್ತು ಚಾಸಾ- **1** ರವರನ್ನು ಠಾಣೆಗೆ ಕರೆಸಿ ವಿಚಾರಣೆಗೆ ಒಳಪಡಿಸಿರುತ್ತೇನೆ ಎಂದರೆ ನನಗೆ ನೆನಪಿಲ್ಲ.

5. ನಿಪಿ– 1 ದೂರು ಸ್ವೀಕರಿಸಿಕೊಳ್ಳುವ ಪೂರ್ವದಲ್ಲಿ ಯಾವುದಾದರು ಆಸ್ಪತ್ರೆಯಿಂದ ಅಥವಾ ಸಾರ್ವಜನಿಕರಿಂದ ಈ ಪ್ರಕರಣದ ಬಗ್ಗೆ ಯಾವುದೆ ಮಾಹಿತಿ ನಮ್ಮ ಠಾಣೆಗೆ ಬಂದಿರುವುದಿಲ್ಲ. ಪಿರ್ಯಾದುದಾರರು ದೂರು ನೀಡುವ ಪೂರ್ವದಲ್ಲಿ ಅವರು ಯಾವುದಾದರೂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ. ದೂರು ಸ್ವೀಕರಿಸುವ ಸಮಯದಲ್ಲಿ ಪಿರ್ಯಾದುದಾರರು ಯಾವುದಾದರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರೋ ಎಂದು ನಾನು ಅವರನ್ನು ಕೇಳಿರುತ್ತೇನೆ, ಅವರು ಇಲ್ಲ ಎಂದು ಹೇಳಿರುತ್ತಾರೆ.

6. ನಿಪಿ–1 ದೂರನ್ನು ಅವಲೋಕಿಸಿದಾಗ ಅದು ಮೇಲ್ನೋಟಕ್ಕೆ ಒಂದು ಸಿವಿಲ್ ವ್ಯಾಜ್ಯಕ್ಕೆ ಸಂಬಂದಪಟ್ಟಿರುತ್ತದೆ ಎಂದು ಕಂಡುಬರುತ್ತದೆ. ನಿಪಿ–1 ದೂರಿನೊಂದಿಗೆ ಪಿರ್ಯಾದುದಾರರು ಕೃತ್ಯ ಸ್ಥಳ ಅವರಿಗೆ ಸೇರಿರುತ್ತದೆ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಲಗತ್ತಿಸಿರುವುದಿಲ್ಲ. 1ನೇ ಆರೋಪಿಯನ್ನು ಹೊರತುಪಡಿಸಿ ಉಳಿದ ಆರೋಪಿತರೆಲ್ಲ ಪಿರ್ಯಾದುದಾರರಿಗೆ ಅಪರಿಚಿತರಾಗಿರುತ್ತಾರೆ ಎಂದು ದೂರಿನಲ್ಲಿ ಕಂಡುಬರುತ್ತದೆ. ನಿಪಿ–1 ದೂರಿನಲ್ಲಿ 1ನೇ ಆರೋಪಿಯನ್ನು ಹೊರತುಪಡಿಸಿ ಬೇರೆ ಆರೋಪಿತರ ಹೆಸರು ವಿಳಾಸ ನಮೂದಿಸಿರುವುದಿಲ್ಲ. ನಿಪಿ–1 ದೂರನ್ನು ಪಿರ್ಯಾದಿ ಯಾರ ಮೂಲಕ ಬರೆಸಿರುತ್ತಾರೆ ಎಂದು ಅದರಲ್ಲಿ ನಮೂದು ಇರುವುದಿಲ್ಲ, ಪಿರ್ಯಾದಿ ಅವರ ಹೆಬ್ಬೆಟ್ಟಿನ ಗುರುತನ್ನು ದೂರಿನಲ್ಲಿ ಹಾಕಿರುತ್ತಾರೆ. ದೂರು ನೀಡುವ ಸಮಯ ಚಾಸಾ- 1 ರವರ ಜೊತೆ ಅವರ ಕುಟುಂಬದವರು ಯಾರಾದರೂ ಬಂದಿದ್ದರಾ ಎಂದರೆ ಯಾರೋ ಇಬ್ಬರು ಬಂದಿದ್ದರು ಅವರು ಯಾರು ಎಂದು ನನಗೆ ಗೊತ್ತಿಲ್ಲ. ದೂರು ದಾಖಲಿಸುವ ಸಮಯ ಚಾಸಾ- 1 ರವರಾಗಲೀ ಅವರ ಕುಟುಂಬಸ್ಥರು ಯಾರಾದರೂ ಆಗಲೀ ಈ ಪ್ರಕರಣದ ಬಾಬ್ತು ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ದೂರಿನಲ್ಲಿ ಯಾವುದೇ ಉಲ್ಲೇಖ ಇರುವುದಿಲ್ಲ. ನಾನು ಚಾಸಾ- 1ರವರ ಒತ್ತಡಕ್ಕೆ ಹಾಗೂ ದಲಿತ ಸಂಘಟನಾಕಾರರ ಒತ್ತಾಯಕ್ಕೆ ಮಣಿದು ಸುಳ್ಳು ದೂರನ್ನು ಸ್ವೀಕರಿಸಿ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

7. ನಮ್ಮ ಠಾಣೆಯಲ್ಲಿ ಈ ವಿಚಾರಕ್ಕೆ ಸಂಬಂದಪಟ್ಟಂತೆ ಕಿರಣ್ ಕುಮಾರ್ ಎನ್ನುವವರು ಚಾಸಾ- 1 ರವರ ವಿರುದ್ದ ದೂರನ್ನು ದಾಖಲಿಸಿರುವುದು ನನ್ನ ಗಮನದಲ್ಲಿ ಇದೆ.

ಈ ಪ್ರಕರಣದ ಪ್ರಥಮ ವರ್ತಮಾನ ವರದಿಯನ್ನು ಮದ್ಯಾಹ್ನ 3.00 ಗಂಟೆಗೆ ದಾಖಲಿಸಿ ಅದೇ ದಿನ ಸುಮಾರು 3.30 ಗಂಟೆಗೆ ಚಾಸಾ- 32 ರವರಿಗೆ ಕಡತವನ್ನು ಸಲ್ಲಿಸಿರುತ್ತೇನೆ. ನಾನು ಕಡತವನ್ನು ಚಾಸಾ- 32 ರವರಿಗೆ ಸಲ್ಲಿಸಿರುವ ಬಗ್ಗೆ ಯಾವುದೆ ಪತ್ರವ್ಯವಹಾರ ನನ್ನ ಕಡತದಲ್ಲಿ ಇರುವುದಿಲ್ಲ. ಈ ಪ್ರಕರಣದ ಕಡತ ಪ್ರಕರಣ ದಾಖಲಿಸಿದ ಒಂದು ವಾರದವರಗೆ ನನ್ನ ಸುಪರ್ದಿನಲ್ಲಿಯೇ ಇತ್ತು ಎಂದರೆ ಸರಿಯಲ್ಲ.

8. ಚಾಸಾ- 32 ರವರು ಪತ್ತೆ ಮಾಡಬೇಕಾದ ಆರೋಪಿತರ ಹೆಸರು ವಿವರಗಳನ್ನು ನಮೂದಿಸಿರುವ ಯಾವುದೇ ದಾಖಲೆಯನ್ನು ನೀಡಿರುವುದಿಲ್ಲ ಎಂದರೆ ಸರಿ. ನಾನು ಪತ್ತೆ ಹಚ್ಚಿ ವಶಕ್ಕೆ ಪಡೆಯಬೇಕಾದ ಆರೋಪಿತರ ಚಹರೆಯ ಬಗ್ಗೆ ಅಥವಾ ಅವರ ಪೋಟೋ ಯಾವುದೂ ನನ್ನ ಬಳಿ ಆ ಸಮಯ ಇರಲಿಲ್ಲ. ನಾನು 2ರಿಂದ 12 ನೇ ಆರೋಪಿತರ ಮನೆಗೆ ಭೇಟಿ ನೀಡಿ ಅವರನ್ನು ಪತ್ತೆ ಹಚ್ಚುವ ಸಲುವಾಗಿ ಮನೆಯ ಶೋಧನೆ ಮಾಡಿರುವುದಿಲ್ಲ. 2ರಿಂದ 12ನೇ ಆರೋಪಿತರು ಅವರವರ ಗ್ರಾಮದಲ್ಲಿರುವ ಅವರ ಮನೆಗಳಲ್ಲಿಯೇ ವಾಸವಿದ್ದರು ಎಂದರೆ ಸರಿಯಲ್ಲ. 2ರಿಂದ 12ನೇ ಆರೋಪಿತರನ್ನು ಅಂಬುಜಮ್ಮ ಪಾರ್ಕಿನ ಬಳಿಯಿಂದ ವಶಕ್ಕೆ ಪಡೆದಿರುತ್ತೇನೆ ಎನ್ನುವ ಸಮಯ ಅವರಿಗೆ ಆ ಬಗ್ಗೆ ತಿಳುವಳಿಕೆ ನೋಟೀಸು ನೀಡಿರುವುದಿಲ್ಲ. 2ರಿಂದ 12ನೇ ಆರೋಪಿತರನ್ನು ಅಂಬುಜಮ್ಮ ಪಾರ್ಕಿನ ಬಳಿಯಿಂದ ವಶಕ್ಕೆ ಪಡೆದಿರುತ್ತೇನೆ ಎನ್ನುವ ಸಮಯ ಆ ಬಗ್ಗೆ ಮಹಜರ್ ಮಾಡಿರುವುದಿಲ್ಲ. 2 ರಿಂದ 12ನೇ ಆರೋಪಿತರನ್ನು ವಶಕ್ಕೆ ಪಡೆಯುವ ಪೂರ್ವದಲ್ಲಿ ಅವರವರ ಸಂಬಂದಿಕರಿಗೆ ಅಥವಾ ಸ್ನೇಹಿತರಿಗೆ ಆ ಬಗ್ಗೆ ತಿಳುವಳಿಕೆ ನೋಟೀಸು ನೀಡಿರುವುದಿಲ್ಲ. ನಾನು 2ರಿಂದ 12ನೇ ಆರೋಪಿತರನ್ನು ಅಕ್ರಮವಾಗಿ ಬಂಧನಕ್ಕೆ ಒಳಪಡಿಸಿರುತ್ತೇನೆ ಎಂದರೆ ಸರಿಯಲ್ಲ. 2ರಿಂದ 12ನೇ ಆರೋಪಿತರಿಗೂ ಈ ಪ್ರಕರಣಕ್ಕೆ ಯಾವುದೇ ಸಂಬಂದ ಇಲ್ಲ ಎಂದು ಮನವರಿಕೆಯಾಗಿದ್ದರೂ ಸಹಾ ಚಾಸಾ- 1 ರವರ ಒತ್ತಡಕ್ಕೆ ಮಣಿದು ಅವರಿಗೆ ಅನುಕೂಲವಾಗಮಂತೆ ಆರೋಪಿತರನ್ನು ವಶಕ್ಕೆ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

9. ನಿಪಿ-1 ದೂರಿನಲ್ಲಿ "*ನಾನು ನನ್ನ ತಾತನ ಕಾಲದಿಂದಲೂ ಗಾಂಧಿನಗರ, 6ನೇ ಕ್ರಾಸ್ ನಲ್ಲಿ ಷೆಡ್ ಹಾಕಿಕೊಂಡು ವಾಸ ಇದ್ದೇನೆ, ನನ್ನ ಜಾಗಕ್ಕೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ*" ಎಂದು ನಮೂದಿಸಿರುವುದಿಲ್ಲ.

10. ನಿಪಿ-1 ದೂರಿನಲ್ಲಿ "*ದಿನಾಂಕ 30.08.2019 ರಂದು ನನ್ನ ಷೆಡ್ ನ ಹತ್ತಿರ ಸುಮಾರು 12 ಜನ ಆರೋಪಿತರು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಹೊಲೆಯ ನನ್ನ ಮಗನೇ ಇವನನ್ನು ಬಿಡಬೇಡಿ ಈ ಸೈಟು ನಮಗೆ ಸೇರಿದ್ದು ಇದನ್ನು ನಾನು ಖಾತೆ ಮಾಡಿಸಿಕೊಂಡಿದ್ದೇನೆ, ನಿಮ್ಮನ್ನು, ನಿಮ್ಮ ಕುಟುಂಬದವರನ್ನು ಸಾಯಿಸದೇ ಬಿಡುವುದಿಲ್ಲ ಎಂದು ಬೈದು ಬೆದರಿಕೆ ಹಾಕಿದರು* " ಎಂದು ನಮೂದಿಸಿರುವುದಿಲ್ಲ.

11. ನಿಪಿ-1 ದೂರಿನಲ್ಲಿ "*ಆರೋಪಿತರು ಕಟ್ಟಿದ ಮನೆಯನ್ನು ಹಾರೆಯಿಂದ ಉರುಳಿಸಿ ಹಾಕಿದರು*" ಎಂದು ನಮೂದಿಸಿರುವುದಿಲ್ಲ.

**ಮರು ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರವರಿಂದಃ** ಇಲ್ಲ ಎಂದು ನುಡಿಯುತ್ತಾರೆ.

(ನನ್ನ ಉತ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
**5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ**
**ನ್ಯಾಯಾಲಯ, ಮಂಡ್ಯ**